

# ಹೃದಯದ ಹೊಸಮಾತು!

'ಬರೆಯದ ಗೀತೆಯ ಗುನುಗಿದೆ ಈ ಹೃದಯ / ಮಡಿಸಿದ ಕಾಗದ ತೆರೆಯದೆ ಓದಲಾರೆಯ?' – ಇದು 'ಮಾದ ಮತ್ತು ಮಾನಸಿ' ಚಿತ್ರದ ಗೀತೆ. ಸಾಹಿತ್ಯದಲ್ಲಿನ ಮಾಧುರ್ಯ ಸಂಗೀತದಲ್ಲೂ ಇದೆ ಎನ್ನುವುದಕ್ಕೂ ಸಂಗೀತ ಸಂಯೋಜನೆ ಮನೋಮೂರ್ತಿ ಅವರದು ಎನ್ನುವುದಕ್ಕೂ ವಿಶೇಷ ಸಂಬಂಧವಿದೆ. ಏಕೆಂದರೆ, ಈ ಸಿನಿಮಾದಲ್ಲಿ ಮನೋಮೂರ್ತಿ ಅವರು ಸಂಗೀತ ನಿರ್ದೇಶಕ ಮಾತ್ರವಲ್ಲ – ನಿರ್ಮಾಪಕ ಕೂಡ ಅವರೇ!

'ಮಾದ ಮತ್ತು ಮಾನಸಿ' ಸತೀಶ್ ಪ್ರಧಾನ್ ನಿರ್ದೇಶನದ ಸಿನಿಮಾ. 'ಅಭಿನೇತ್ರಿ' ಚಿತ್ರವನ್ನು ನಿರ್ದೇಶಿಸಿದ್ದ ಸತೀಶ್, ಈಗ ಮಾದ–ಮಾನಸಿಯ ಲವ್‌ಸ್ಟೋರಿ ನಿರೂಪಿಸಿದ್ದಾರೆ. ಹೊಸ ತಲೆಮಾರಿನ ಹುಡುಗ ಹುಡುಗರ ಮಧುರ ಭಾವನೆಗಳಿಗೆ ತಮ್ಮ ಸಿನಿಮಾ ಅದ್ಭುತವಾಗಿ ಸ್ಪಂದಿಸಿದೆ ಎನ್ನುತ್ತಾರೆ ಸತೀಶ್.

ಪ್ರಜ್ವಲ್ ದೇವರಾಜ್ ಹಾಗೂ ಶ್ರುತಿಹರಿಹರನ್ ಚಿತ್ರದ ನಾಯಕ–ನಾಯಕಿ. ಇಬ್ಬರಿಗೂ ತಮ್ಮ ಪಾತ್ರ ಸ್ಟೈಲಿಷ್ ಆಗಿದೆ ಹಾಗೂ ಗಟ್ಟಿತನ ಹೊಂದಿದೆ ಎನ್ನಿಸಿದೆ. ದೊಡ್ಡ ಗೆಲುವೊಂದಕ್ಕೆ ಹಂಬಲಿಸುತ್ತಿರುವ ಪ್ರಜ್ವಲ್, ಈ ಸಿನಿಮಾದ ಮೂಲಕ ಹಿತಕರವಾದ ಅಚ್ಚರಿಯ ನಿರೀಕ್ಷೆಯಲ್ಲಿದ್ದಾರೆ. ಕೆ.ಎಸ್. ಚಂದ್ರಶೇಖರ್ ಛಾಯಾಗ್ರಹಣ ಹಾಗೂ ಡಿಫರೆಂಟ್ ಡ್ಯಾನಿ ಸಾಹಸ ಸಂಯೋಜನೆ ಇರುವ ಚಿತ್ರದ ತಾರಾಗಣದಲ್ಲಿ ರಂಗಾಯಣ ರಘು, ಬುಲೆಟ್ ಪ್ರಕಾಶ್, ಶೋಭರಾಜ್, ಪವನ್, ವಾಣಿಶ್ರೀ, ಮುಂತಾದವರಿದ್ದಾರೆ.



# ಗುಬ್ಬಿಯ ಪ್ರೇಮಕಥೆ

ಸೊಗಸಾದ ಶೀರ್ಷಿಕೆಯ ಜೊತೆಗೆ, ಹಾಡುಗಳ ಮೂಲಕವೂ ಚಿತ್ರರಸಿಕರಲ್ಲಿ ನಿರೀಕ್ಷೆ ಹುಟ್ಟಿಸಿರುವ ಸಿನಿಮಾ 'ನಾನು ಮತ್ತು ವರಲಕ್ಷ್ಮಿ'. ಪ್ರೀತಂ ಗುಬ್ಬಿ ನಿರ್ದೇಶನದ ಈ ಸಿನಿಮಾ ಇತ್ತೀಚೆಗೆ ಚಿತ್ರದ ಗೀತೆಗಳ ಧ್ವನಿಮುದ್ರಿಕೆಯನ್ನು ಬಿಡುಗಡೆ ಮಾಡಿದ್ದು, ಸದ್ಯದಲ್ಲೇ ಚಿತ್ರ ತೆರೆಕಾಣಲಿದೆ.

ಪ್ರೀತಂ ನಿರ್ದೇಶನದ ಸಿನಿಮಾಗಳು ಲವಲವಿಕೆಗೆ ಹಾಗೂ ನವಿರುತನದ ನಿರೂಪಣೆಗೆ ಹೆಸರಾದವು. 'ನಾನು ಮತ್ತು ವರಲಕ್ಷ್ಮಿ' ಕೂಡ ತರುಣತರುಣಿಯರ ಮನಸ್ಸು ಸೆಳೆಯುವ ಎಲ್ಲ ಗುಣಗಳನ್ನೂ ಹೊಂದಿದೆ ಎಂದು ಚಿತ್ರತಂಡ ಬಣ್ಣಿಸುತ್ತಿದೆ. ಅಂದಹಾಗೆ, ಈ ಚಿತ್ರಕ್ಕೆ ಸಂಬಂಧಿಸಿದಂತೆ ಮತ್ತೂ ಒಂದು ವಿಶೇಷವಿದೆ. ಕನ್ನಡ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಅವರ ಮೊಮ್ಮಗ ಪೃಥ್ವಿ ಚಿತ್ರದ ನಾಯಕರಾಗಿ ನಟಿಸಿದ್ದಾರೆ ಎನ್ನುವ ವಿಶೇಷವದು. ಎಂಜಿನಿಯರಿಂಗ್ ಕಲಿತಿರುವ ಪೃಥ್ವಿ, ಸಿನಿಮಾ ಮೂಲಕ ತಮ್ಮ ಬದುಕಿಗೆ ಹೊಸ ತಿರುವ ಪಡೆಯುವ ಹುಮ್ಮಸ್ಸಿನಲ್ಲಿದ್ದಾರೆ.

ಪೃಥ್ವಿ ಸಂಗೀತ ನಿರ್ದೇಶಕ ಹರಿಕೃಷ್ಣ ಅವರ ಸೋದರ ಸಂಬಂಧಿ. ತಮ್ಮ ಮನೆಯ ಹುಡುಗನ ಸಿನಿಮಾಕ್ಕಾಗಿ ಹರಿಕೃಷ್ಣ ಸಾಕಷ್ಟು ಆಸ್ಥೆಯಿಂದ ಕೆಲಸ ಮಾಡಿದ್ದಾರೆ. ನಟನಾಗಿ ಪೃಥ್ವಿ ಯಶಸ್ಸು ಗಳಿಸುವ ವಿಶ್ವಾಸ ಹರಿಕೃಷ್ಣ ಅವರದು.

ಬೈಕ್ ರೇಸಿಂಗ್‌ಗೆ ಸಂಬಂಧಿಸಿದ ಕಥೆಯ ಕಾರಣದಿಂದಲೂ ಈ ಚಿತ್ರ ನಿರೀಕ್ಷೆ ಹುಟ್ಟಿಸಿದೆ. ಬೈಕ್ ರೇಸಿಂಗ್ ವಸ್ತುವೇ ಪ್ರಧಾನವಾಗುಳ್ಳ ಕಥೆಯ ಸಿನಿಮಾ ಕನ್ನಡಕ್ಕೆ ಹೊಸತು. ಕ್ಲೈಮ್ಯಾಕ್ಸ್‌ಗೆ 50 ಲಕ್ಷ ರೂಪಾಯಿ ಖರ್ಚಾಗಿದೆ ಎನ್ನುವುದು ಚಿತ್ರದ ಅದ್ದೂರಿತನವನ್ನು ಸೂಚಿಸುವಂತಿದೆ. ಜನಪ್ರಿಯ ನಟ ಪ್ರಕಾಶ್ ರೈ ಅವರು ತರಬೇತುದಾರನ ಪಾತ್ರದಲ್ಲಿ ನಟಿಸಿದ್ದಾರಂತೆ. ಮಲೆಯಾಳಂ, ಹಿಂದಿ ಚಿತ್ರಗಳಲ್ಲಿ ನಟಿಸಿರುವ ಮಾಳವಿಕಾ ಚಿತ್ರದ ನಾಯಕಿ. ಮಧು, ಅಚ್ಯುತಕುಮಾರ್ ಹಾಗೂ ಪವಿತ್ರಾಲೋಕೇಶ್ ತಾರಾಗಣದಲ್ಲಿರುವ ಪ್ರಮುಖರು.